UASB LIBRARY
Newspaper Clippings
Pg .1 Monday 04-10-2021 Jai Kisan



ವಿಜಯವಾಣಿ ರೈತ ಮಿತ್ರ

■ **ಈ ಬಾರಿಯ ಹಿಂಗಾರಿನಲ್ಲಿ ಅವರೆ ಬೆಳೆ ಬೆಳೆಯಲು ಬಯಸಿದ್ದು, ಅದರ ತಳಿಗಳು ಹಾಗೂ ಬೇಸಾಯ ಕ್ರಮಗಳ ಬಗ್ಗೆ ತಿಳಿಸಿ?**

| ಚಿಕ್ಕೇಗೌಡ ಗುಡ್ಡಹಳ್ಳಿ, ಮಾಗಡಿ ತಾಲೂಕು

ಉತ್ತರ: ತಳಿಗಳು

ತಳಿಗಳು	ಬಿತ್ತನೆ ಕಾಲ	ಅವಧಿ (ದಿನ)	ಇಳುವರಿ (ಕ್ವಿ./ಎ.)
ಎಚ್.ಎ. 3	ಮುಂಗಾರು: ಆಗಸ್ಟ್ ಹಿಂಗಾರು: ಅಕ್ಟೋಬರ್ ಬೇಸಿಗೆ: ಫೆಬ್ರವರಿ-ಮಾರ್ಚ್	90-100	ಕಾಳು: 3-4 ಹಸಿಕಾಯಿ: 12-15
ಎಚ್.ಎ. 4		95-105	

ಬೇಸಾಯ ಕ್ರಮ: ಪ್ರತಿ ಎಕರೆಗೆ 3 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಅನ್ನು 15-20 ದಿನಗಳ ಮುಂಚೆ ಮಣ್ಣಿಗೆ ಸೇರಿಸಿ ಉಳಮೆ ಮಾಡಿ ಭೂಮಿಯನ್ನು ಹದ ಮಾಡಿದ ನಂತರ ಎಕರೆಗೆ ಬೇಕಾದ (10-12 ಕಿ.ಗ್ರಾಂ) ಬೀಜವನ್ನು 200 ಗ್ರಾಂ ರೈಜೋಬಿಯಂ ಮತ್ತು 200 ಗ್ರಾಂ ರಂಜಕ ಕರಗಿಸುವ ಜೀವಾಣುವಿನಿಂದ ಉಪಚರಿಸಿ ನಂತರ 50 ಕಿ.ಗ್ರಾಂ ಡಿ.ಎ.ಪಿ. ಮತ್ತು 20 ಕಿಗ್ರಾಂ ಪೋಟ್ಯಾಷ್ (ಎಂ.ಒ.ಪಿ.) ಅನ್ನು ಸಾಲುಗಳಲ್ಲಿ (1.5-2 ಅಡಿ ಅಂತರದ) ಸೇರಿಸಿ ಬೀಜದಿಂದ ಬೀಜಕ್ಕೆ ಅರ್ಧ ಅಡಿ ಅಂತರದಲ್ಲಿ ಬಿತ್ತನೆ ಮಾಡುವುದು.

ಕಳೆ ನಿರ್ವಹಣೆ: ಉದಯಪೂರ್ವ ಕಳೆನಾಶಕ (ಬಿತ್ತನೆ ಮಾಡಿದ ಎರಡು ದಿನದೊಳಗೆ) -ಅಲಾಕ್ಲೋರ್ 50 ಇ.ಸಿ. ಅಥವಾ ಪೆಂಡಿಮಿಥಾಲೀನ್ 30 ಇ.ಸಿ. 1 ಲೀ. ಅನ್ನು 300 ಲೀ. ನೀರಿನಲ್ಲಿ ಹಾಗೂ ಉದಯೋತ್ತರ ಕಳೆನಾಶಕ (ಬಿತ್ತನೆಯಾದ 20-25 ದಿನಗಳಲ್ಲಿ)- ಇಮ್ಯಾಜಥಫಿರ್ ಶೇ.10 ಎಸ್.ಎಲ್. 400ಮಿ.ಲೀ. ಅನ್ನು 200ಲೀ. ನೀರಿನಲ್ಲಿ ಸೇರಿಸಿ ಪ್ರತಿ ಎಕರೆಗೆ ಸಿಂಪರಣೆ ಮಾಡುವುದು.

ಸಸ್ಯ ಸಂರಕ್ಷಣೆ: ರಸ ಹೀರುವ ಕೀಟಗಳು - 2ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಪ್ರತಿ ಲೀ. ನೀರಿಗೆ.

ಕಾಯಿ ಕೊರಕ - ಫೆನ್‌ವೆಲರೇಟ್ ಶೇ.0.4 ಡಿ ಅಥವಾ ಮಾಲಾಥಿಯಾನ್ ಶೇ.5 ಡಿ. 10 ಕಿ.ಗ್ರಾಂ ಪ್ರತಿ ಎಕರೆಗೆ ಬೆಳಗಿನ ಹೊತ್ತಿನಲ್ಲಿ ಗಿಡಗಳ ಮೇಲೆ ಧೂಳೀಕರಿಸುವುದು.

| ಹರ್ಷಕುಮಾರ್ ಎಸ್.ಎಸ್., ಬೇಸಾಯ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

■ **ತೊಗರಿಯಲ್ಲಿ ಕಾಯಿ ಕೊರಕದ ಹತೋಟಿ ಹೇಗೆ?**

| ಪ್ರಶಾಂತ್ ಪಾಟೀಲ್ ಬೀದರ್

ಉತ್ತರ: ಕಾಯಿಕೊರಕದ ಹೆಣ್ಣು ಪತಂಗವು ಕುಡಿ, ಮೊಗ್ಗು, ಹೂ ಮತ್ತು ಎಳೆ ಕಾಯಿಗಳ ಮೇಲೆ ಮೊಟ್ಟೆ ಇಡುತ್ತದೆ. ಮರಿ ಹುಳುಗಳು ಪ್ರಾರಂಭಿಕ ಹಂತದಲ್ಲಿ ಎಲೆಯ ಹಸಿರು ಭಾಗ ಕೆರೆದು ತಿಂದು ನಂತರ ಹೂ, ಕಾಯಿಗಳಲ್ಲಿ ರಂಧ್ರ ಮಾಡಿ ಒಳ ಭಾಗ ತಿನ್ನುತ್ತವೆ.

ಸಮಗ್ರ ಹತೋಟಿ: ಮಾಗಿ ಉಳುಮೆ ಮಾಡುವುದು; ಪಕ್ಷಿಗಳು ಕೂತು ಹುಳುಗಳನ್ನು ತಿನ್ನಲು ಅನುಕೂಲವಾಗುವಂತೆ ಬೆಳೆಯ ಸ್ವಲ್ಪ ಎತ್ತರದಲ್ಲಿ ಕವಲೊಡೆದ ರೆಂಬೆಗಳನ್ನು ನೆಡುವುದು; ಬೆಳೆ 50-60 ದಿನಗಳಾಗಿದ್ದಾಗ ಎಕರೆಗೆ 3-4 ಮೋಹಕ ಬಲೆಗಳನ್ನು ಬೆಳೆಗಿಂತ ಸ್ವಲ್ಪ ಎತ್ತರದಲ್ಲಿರುವಂತೆ ಅಳವಡಿಸುವುದು; ಶೇ.50 ಗಿಡಗಳು ಹೂ ಬಿಟ್ಟಾಗ, ಗಿಡದಲ್ಲಿ ಸರಾಸರಿ 2 ಮೊಟ್ಟೆ ಅಥವಾ ಒಂದು ಹುಳ ಕಂಡಾಗ, ಮೊಟ್ಟೆ ನಾಶಕಗಳಾದ ಥೈಯೋಡಿಕಾರ್ಬ್ 75 ಡಬ್ಲ್ಯು.ಪಿ. 0.6 ಗ್ರಾಂ ಅಥವಾ 2.0 ಮಿ.ಲೀ. ಪ್ರೊಫಿನೋಫಾಸ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು; ಮರಿಹುಳು ಎರಡನೇ ಹಂತದಲ್ಲಿದ್ದಾಗ (3-5 ಮಿ.ಮೀ. ಉದ್ದ) ಹೆಲಿಕೋವರ್ಪ ಎನ್.ಪಿ.ವಿ. ನಂಜಾಣುವನ್ನು ಎಕರೆಗೆ 200 ಎಸ್.ಎಲ್.ನಂತೆ ತಂಪಾದ ವಾತಾವರಣವಿದ್ದಾಗ ಸಿಂಪಡಿಸಬೇಕು. ಜತೆಗೆ ಪ್ರತಿ ಲೀಟರ್ ನೀರಿಗೆ 5 ಗ್ರಾಂ. ಬೆಲ್ಲ ಮತ್ತು 1 ಮಿ.ಲೀ. ಟಿಪಾಲ್ ಬೆರೆಸಿ ಸಿಂಪಡಿಸಿದರೆ ಹೆಚ್ಚು ಪರಿಣಾಮಕಾರಿ; ಕಾಯಿಕೊರಕದ ಹಾವಳಿ ಹೆಚ್ಚಾದಾಗ ಕ್ಲೋರಾಂಟ್ರಾನ್ಯಾಲಿಪ್ರೋಲ್ (ಕೊರಾಜೆನ್ 20 ಎಸ್.ಸಿ.) 0.3 ಮಿ.ಲೀ. ಅಥವಾ ಫ್ಲೂಬೆಂಡಿಯಾಮೈಟ್ 480 ಎಸ್.ಸಿ. 0.25 ಮಿ.ಲೀ. ಅಥವಾ 0.5 ಗ್ರಾಂ. ಎಮಾಮೆಕ್ಟಿನ್ ಬೆಂಜೋಯೆಟ್ ಅಥವಾ ಸ್ಪೈನೋಸ್ಯಾಡ್ 45 ಎಸ್.ಸಿ. 0.25 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.

| ಡಾ. ಬಿ.ಎಸ್. ರಾಜೇಂದ್ರ ಪ್ರಸಾದ್ ಕೀಟಶಾಸ್ತ್ರ ತಜ್ಞರು

■ **ಅಡಕೆಯಲ್ಲಿ ಹಳದಿ ರೋಗದ ನಿಯಂತ್ರಣದಲ್ಲಿ ಪೋಷಕಾಂಶಗಳ ನಿರ್ವಹಣೆ ವಿಧಾನ ಹೇಗೆ?**

| ಮಲ್ಲೇಶ್ ಮಾವಿನಕೊಪ್ಪ, ಶಿವಮೊಗ್ಗ ತಾಲೂಕು

ಉತ್ತರ: ಹಳದಿ ರೋಗವು ಈಗಾಗಲೆ ಹಲವು ಭಾಗಗಳಲ್ಲಿ ಕಂಡುಬಂದಿದ್ದು, ಗಿಡ/ಮರಗಳ ಸುಳಿ ಭಾಗದ 2-3 ಎಲೆಗಳು ಮೊದಲಿಗೆ ಹಳದಿಯಾಗಲು ಶುರುವಾಗಿ ಅದು ಹೆಚ್ಚಾದಂತೆ ಕಂದು ಬಣ್ಣದ ನೆಕ್ರೋಟಿಕ್ ಗೆರೆಗಳು ಹೆಚ್ಚಾಗಿ ಲ್ಯಾಮಿನಾ ಮಧ್ಯಕ್ಕೆ ವಿಸ್ತರಿಸಿ ಗಿಡದ ಎಲ್ಲ ಎಲೆಗಳು ಹಳದಿಯಾಗಿ ಸುಳಿಯು ಉದುರಿ ಬರಿ ಕಾಂಡ ಉಳಿಯುತ್ತದೆ.

ನಿರ್ವಹಣೆ: ಹಳದಿ ರೋಗವಿರುವ ತೋಟದಲ್ಲಿ ಪೋಷಕಾಂಶ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕು; ತೋಟದಲ್ಲಿ ನೀರು ನಿಲ್ಲದಂತೆ ನೋಡಿಕೊಂಡು ಬಸಿಗಾಲುವೆ ನಿರ್ಮಿಸಿ ಬೇರಿಗೆ ಗಾಳಿಯಾಡುವಂತೆ ಮಾಡುವುದು; 12-15 ಕಿ.ಗ್ರಾಂ ಸಾವಯವ ಗೊಬ್ಬರ, 100:40:140 ಗ್ರಾಂ

ಸಾರಜನಕ: ರಂಜಕ: ಪೋಟ್ಯಾಷ್ ರಸಗೊಬ್ಬರಗಳ ಜತೆಗೆ ಒಂದು ಕಿ.ಗ್ರಾ ಸೂಪರ್ ಫಾಸ್ಫೇಟ್, 50 ಗ್ರಾಂ ಸತು ಮತ್ತು 50 ಗ್ರಾಂ ಮ್ಯಾಗ್ನಿಷಿಯಂ ಅನ್ನು ಪ್ರತಿ ಮರಕ್ಕೆ ಪ್ರತಿ ವರ್ಷ ನೀಡಬೇಕು; ಬೇಸಿಗೆಯಲ್ಲಿ ಸಂರಕ್ಷಣಾ ನೀರಾವರಿಯನ್ನು ಒದಗಿಸುವುದು ಸೂಕ್ತ.

| ಬಿ. ಪ್ರಿಯಾಂಕ ಸಸ್ಯರೋಗ ತಜ್ಞರು

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹೋಳಿಗೆಗೂ ಅಡಕೆ ಸೈ

■ ವೇಣುವಿನೋದ್ ಕೆ.ಎಸ್. ಮಂಗಳೂರು

ಅಡಕೆ ಜಗಿದು ಉಗಿಯುವುದಕ್ಕೆ ಎಂದು ಹೀಗೆಳೆಯುವ ಹಾಗಿಲ್ಲ. ನಿರಂತರ ಮೌಲ್ಯವರ್ಧನೆ ದಾರಿಯಲ್ಲಿರುವ ಅಡಕೆಯಲ್ಲಿ ಹಲವು ಉತ್ಪನ್ನ ಸಿದ್ಧಪಡಿಸಲಾಗುತ್ತಿದೆ. ಅಡಕೆಯ ಹೋಳಿಗೆ ಈ ಪಟ್ಟಿಗೆ ಲೇಟಿಸ್ಟ್ ಸೇರ್ಪಡೆ.

ಅಡಕೆ ಚೊಗರಲ್ವೇ? ತಿನ್ನುವುದು ಹೇಗೆ ಸಾಧ್ಯ ಎಂಬಿತ್ಯಾದಿ ಸಂದೇಹಗಳು ನಿಮ್ಮಲ್ಲಿರಬಹುದು. ಆದರೆ ಅದೆಲ್ಲವನ್ನೂ ಪರಿಹರಿಸಿಕೊಂಡು ದಕ್ಷಿಣಕನ್ನಡ ಜಿಲ್ಲೆಯ ಯುವಕನೊಬ್ಬ ಅಡಕೆಯಿಂದಲೂ ಸಿಹಿತಿಂಡಿ ತಯಾರಿಸಲು ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ.

ಕೃಷಿ, ಅಡುಗೆ ಕೆಲಸ ಮಾಡಿಕೊಂಡಿರುವ ಪುತ್ತೂರು ತಾಲೂಕಿನ ಬಲ್ನಾಡು ಗುರಿಮೂಲೆಯ ಶ್ರೀಕೃಷ್ಣ ಶಾಸ್ತ್ರಿ, ಕೆಲದಿನಗಳ ಹಿಂದೆ ಅಡಕೆಯಿಂದ ಹೋಳಿಗೆ ಮಾಡಿದರೆ ಕೃಷಿಕರಿಗೆ ಒಂದಷ್ಟು ಸಹಾಯವಾಗಬಹುದು ಎಂದು ಯೋಚಿಸಿ, ಕಾರ್ಯತಂತ್ರ ರೂಪಿಸಿದರು. ಅಡಕೆಯನ್ನು ಮಿಲ್‌ನಲ್ಲಿ ಪುಡಿ ಮಾಡಿಸಿದರು. ಆದರೆ ಹೋಳಿಗೆಗೆ ಬೇಕಾದಷ್ಟು ಸಣ್ಣ ಪುಡಿಯಾಗಲಿಲ್ಲ. ಅದನ್ನು ಮನೆಗೆ ತಂದು ತುಪ್ಪದಲ್ಲಿ ಹುರಿದು ಮತ್ತೆ ಮಿಕ್ಸಿಯಲ್ಲಿ ಮತ್ತಷ್ಟು ಪುಡಿ ಮಾಡಿಕೊಂಡರು. ಬಳಿಕ ಸಕ್ಕರೆ ಪಾಕ ಮತ್ತಿತರ ವಸ್ತುಗಳನ್ನು ಸೇರಿಸಿ ಪಾಕ ಬರಿಸಿ ಹೂರಣ ಸಿದ್ಧಗೊಳಿಸಿದರು. ಮೈದಾ ಬಳಸಿ ಸಾಂಪ್ರದಾಯಿಕವಾಗಿ ಕಣಕವನ್ನೂ ಮಾಡಿಕೊಂಡರು. ಸಾಮಾನ್ಯ ಹೋಳಿಗೆಯಂತೆಯೇ ಕಣಕದೊಳಗೆ ಹೂರಣ ಇಟ್ಟು



ಮಣೆಯಲ್ಲಿ ಹೋಳಿಗೆ ಮಾಡಿ ಬೇಯಿಸಿದರು. ಅಡಕೆ ಹೋಳಿಗೆಯ ರುಚಿಯನ್ನು ಮನೆಯವರು, ಸಮೀಪ ಬಂಧುಗಳು ಮೆಚ್ಚಿಕೊಂಡರು. ಅಡಕೆಯ ಚೊಗರು ಸಿಹಿಯೊಂದಿಗೆ ನಸುವಾಗಿ ಬೆರೆತು ಅದರದ್ದೇ ಭಿನ್ನ ರುಚಿ ಸಿಗುತ್ತದೆ. ಹೂರಣ ಪಾಕ ಬರಿಸುವ ಕಾರಣ ಅಡಕೆಯ ಚೊಗರು ಸಾಕಷ್ಟು ನಿಯಂತ್ರಣ ಆಗುತ್ತದೆ ಎನ್ನುತ್ತಾರೆ ಶಾಸ್ತ್ರಿ.

ಅಡಕೆ ಪುಡಿ ಸವಾಲು

ದೊಡ್ಡ ಪ್ರಮಾಣದಲ್ಲಿ ಅಡಕೆ ಹೋಳಿಗೆ ಮಾಡುವುದು ಸದ್ಯಕ್ಕೆ ಶಾಸ್ತ್ರಿ ಅವರಿಗೆ ಸವಾಲು. ಯಾಕೆಂದರೆ ಅಷ್ಟು ಪ್ರಮಾಣದಲ್ಲಿ ಅಡಕೆ ಪುಡಿ ಮಾಡಿಕೊಳ್ಳುವುದು ಕಷ್ಟ. ಹಾಗಾಗಿ ಅವರು ಅದಕ್ಕೆ ಪ್ರತ್ಯೇಕ ಯಂತ್ರಗಳನ್ನು ಖರೀದಿಸುವ ಯೋಜನೆಯಲ್ಲಿದ್ದಾರೆ. ನನಗೆ ಹಲವೆಡೆಗಳಿಂದ ಅಡಕೆ ಹೋಳಿಗೆಗೆ ಆರ್ಡರ್ ಬರುತ್ತಿದೆ. ಆದರೆ ಸದ್ಯಕ್ಕೆ ಒಪ್ಪಿಕೊಳ್ಳುತ್ತಿಲ್ಲ. ಅಡಕೆ ಪುಡಿ ಮಾಡುವ ಕೆಲಸ ಸರಾಗವಾದ ಬಳಿಕವಷ್ಟೇ ದೊಡ್ಡ ಪ್ರಮಾಣದಲ್ಲಿ ಹೋಳಿಗೆ ಪೂರೈಸಬಹುದು ಎನ್ನುತ್ತಾರೆ ಶ್ರೀಕೃಷ್ಣ ಶಾಸ್ತ್ರಿ.

ಕೊಕ್ಕೊ ಹೋಳಿಗೆಯೂ ಸಕ್ಸಸ್

ಕೊಕ್ಕೊದಿಂದಲೂ ಶಾಸ್ತ್ರಿ ಯಶಸ್ವಿಯಾಗಿ ಹೋಳಿಗೆ ಸಿದ್ಧಪಡಿಸಿದ್ದಾರೆ. ಒಣ ಕೊಕ್ಕೊ ಬೀಜವನ್ನು ಹುರಿದು ಸಿಪ್ಪೆ ತೆಗೆದು ಪುಡಿ ಮಾಡಿ ಸಕ್ಕರೆ ಪಾಕದೊಂದಿಗೆ ಮಿಶ್ರ ಮಾಡಿ ಅಗತ್ಯ ವಸ್ತು ಸೇರಿಸಿ ಹೂರಣ ರೆಡಿ ಮಾಡುವುದು, ಎಂದಿನಂತೆ ಕಣಕದ ಒಳಗೆ ಇರಿಸಿ ಲಟ್ಟಿಸುವುದು. ಇದರಿಂದ ಚಾಕಲೇಟ್ ರುಚಿಯುಳ್ಳ ಹೋಳಿಗೆ ಮೆಲ್ಲಬಹುದು.

04-10-2021 Vv Pg 11

'Native shade trees in coffee plantations vital'

K.C. DEEPIKA
BENGALURU

Verdant coffee and tea plantations are more than an ideal backdrop for photos; they support a thriving avian population. In a study that underscores the need to understand the patterns and drivers of bird species composition and diversity outside Protected Area (PA) networks to develop landscape-level conservation strategies, researchers found that they varied in differently-managed plantations.

The findings were the result of collaborative work by Kannur University, Kerala, Salim Ali Centre for Ornithology and Natural History, Coimbatore, Ashoka Trust for Research in Ecology and the Environment (ATREE), Bengaluru, and Ferns Nature Conservation Society, Wayanad. It was published in July 2021.

Focussing on the coffee plantations in the Western Ghats, which are an important agro-ecosystem and help maintain a significant portion of regional avian diversity, the researchers compared the composition and functional diversity of resident birds between



The joint study found bird species richness to be higher in shade coffee plantations that had 78 species than in open coffee plantations that had 55 species. •SPECIAL ARRANGEMENT

shade and open coffee plantations.

They counted 3,846 birds of 87 species, and found species richness to be higher in shade (78 species) than in open coffee plantations (55 species). "Interestingly, 32 species were unique to shade and nine were unique to open coffee plantations, with 46 species found in both types of plantation. Species richness and abundance were higher in shade coffee," the study says, adding that the results reveal that different farm management practices can affect functional bird richness and its abundance in coffee plantations. They have made a case for retaining shade-trees of native varieties in coffee plantations to support high functional diversity, richness, and abundance of birds in the coffee plantation of the Western Ghats.

The study, 'Resident birds show different patterns in species composition and functional diversity in differently managed coffee plantations in the Western Ghats, India', was published by the Ornithological Science journal in July 2021.

Speaking to *The Hindu*, Santhanakrishnan Babu, one of the authors, said the study was conducted between May and August, 2016, in the northern part of Wayanad district. "Wayanad is a major coffee producer, producing 90% of the Kerala's coffee. Our study aimed to understand how resident birds respond to differently-managed coffee plantations - shade and open," he said.

The Kerala government recently passed an order to chop all resident trees on private land except sandalwood. This will lead to extensive chopping of resident trees from the coffee plantations which will affect biodiversity, he added.

Another author Athira S. Variar and Mr. Babu said retaining shade trees of native varieties in coffee plantations is important for supporting high functional diversity, richness, and abundance of birds. "Shade plantations support several habitat specialists and range-restricted birds, and alteration of the canopy and woody plant composition can influence the pattern of the functional composition of resident birds. Since our study covered only one season, year-round study in these plantations may shed more light on the composition of resident, breeding and migratory bird species," they said.

Conservation strategies

They have called for landscape-level conservation strategies. Author Anoop N.R. pointed out that the Forest Department has little authority over the plantations located outside forest areas, and trees in these plantations are increasingly being replaced with exotic trees such as Grevillea robusta. "To promote the protection of large native trees in coffee plantations, we recommend initiating programmes to provide financial incentives to private landowners. Education programmes will also help to improve community support for retaining texisting indigenous tree varieties and promote planting more of the same," he recommended, adding that a framework needs to be developed with regard to which species can be planted and which must be maintained, or removed, from the plantations.

04-10-2021 Hindu Pg 03

ಬಟ್ಟೆ ರಂಗಿಗೆ ಹೂವಿನ ಬಣ್ಣ



ಈಗ ಭಾರತದಲ್ಲಿ ಅನೇಕ ದೇವಸ್ಥಾನಗಳಿಂದ ಹೊರಹಾಕುವ ಹೂವು (ನಿರ್ಮಾಲ್ಯ), ನದಿಗಳಲ್ಲಿ ಪೂಜೆಗೆಂದು ತೇಲಿ ಬಿಡುವ ಪುಷ್ಪಗಳನ್ನು ಸಂಗ್ರಹಿಸಿ ಅದನ್ನು ಸರಿಯಾದ ರೀತಿಯಲ್ಲಿ ಮರುಬಳಕೆ ಮಾಡುವ ಸಂಘ ಸಂಸ್ಥೆಗಳು ಹುಟ್ಟುತ್ತಿವೆ. ಉದಾಹರಣೆಗೆ ಕಾನ್ಪುರದಲ್ಲಿರುವ ಹೆಲ್ಪ್ ಅಸ್ ಗ್ರೀನ್ ಎಂಬ ಸಂಸ್ಥೆ, ಮುಂಬೈನ ಅದಿವ್ ಪ್ಯೂರ್ ನೇಚರ್ ಎಂಬ ಸಂಸ್ಥೆಗಳು ನಿರಂತರ ಹೂವಿನ ಮರುಬಳಕೆಯಲ್ಲಿ ತೊಡಗಿವೆ.

ನಮ್ಮ ರಾಜ್ಯದಲ್ಲಿ ವರ್ಷಕ್ಕೆ ಸರಿಸುಮಾರು 1.3 ಲಕ್ಷ ಟನ್ ಹೂವನ್ನು ಬೆಳೆಯಲಾಗುತ್ತದೆ. ಇದರಲ್ಲಿ ಹೆಚ್ಚಿನದು ಚೆಂಡು ಹೂವು. ಆಂಕಿಅಡಂಗಳ ಪ್ರಕಾರ ವರ್ಷಕ್ಕೆ ಸುಮಾರು 64 ಸಾವಿರ ಟನ್ ಚೆಂಡು ಹೂವನ್ನು ಬೆಳೆಯಲಾಗುತ್ತದೆ. ಬೆಳೆದದ್ದೆಲ್ಲವೂ ಬಳಕೆಯಾಗುವುದಿಲ್ಲ. ನೂರಾರು ಟನ್ ಹೂವು ವ್ಯಾಪಾರವಾಗದೆ ಉಳಿದುಬಿಡುತ್ತದೆ. ಇಂತಹ ಹೂವಿನ ತ್ಯಾಜ್ಯವನ್ನು ನೈಸರ್ಗಿಕ ಬಣ್ಣ ಅಥವ ನ್ಯಾಚುರಲ್ ಕಲರ್ ಡೈ ಮಾಡುವುದರಲ್ಲಿ ನಮ್ಮ ರಾಜ್ಯದ ಎರಡು ಸಹಕಾರಸಂಘ ಸಂಸ್ಥೆಗಳು ದುಡಿಯುತ್ತಿವೆ.

ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿರುವ ಜನಪದ ಸೇವಾ ಟ್ರಸ್ಟ್ ಪ್ರಕಾಶನವು ಚೆಂಡು ಹೂವನ್ನು ಬಳಸಿ ನೈಸರ್ಗಿಕ ಬಣ್ಣವನ್ನು ತಯಾರಿಸುವ ವಿವಿಧರೀತಿಗಳನ್ನು ಪ್ರಯೋಗಿಸುತ್ತಿದೆ. ಅವರ ಪ್ರಕಾರ ಹೂವಿನ ಮರುಬಳಕೆ ಜೊತೆಗೆ ಕೃತಕ ರಾಸಾಯನಿಕ ಬಣ್ಣಗಳ ಉಪಯೋಗವನ್ನು ಕಡಿಮೆ ಮಾಡಬಹುದಾಗಿದೆ. ಹಬ್ಬದ ಸಮಯದಲ್ಲಿ ಹೂವಿಗೆ ಅಧಿಕ ಬೇಡಿಕೆ ಇರುವುದು ನಿಜ. ಆದರೆ ಬೆಳೆಗಾರರು ವರ್ಷವಿಡೀ ಹೂವನ್ನು ಬೆಳೆಯುವುದರಿಂದ ಎಷ್ಟೋ ಬಾರಿ ಅಧಿಕ ಹೂವು ಮಾರಾಟವಾಗದೆ ಉಳಿದು ಬಿಡುತ್ತವೆ. ಇಂತಹ ಹೂವನ್ನು ಬಳಸಿಕೊಂಡು ಈ ಟ್ರಸ್ಟ್‌ನವರು ನೈಸರ್ಗಿಕ ಹಳದಿ ಬಣ್ಣವನ್ನು ತಯಾರಿಸುತ್ತಿದ್ದಾರೆ.

ಉಡುಪಿ ಜಿಲ್ಲೆಯ ಕಾರ್ಕಳದ ಕಡಿಕೆ ಟ್ರಸ್ಟ್ ಅವರು ಚೆಂಡು ಹೂವಿನ ತ್ಯಾಜ್ಯದಿಂದ ನೈಸರ್ಗಿಕ ಡೈ ತಯಾರಿಕೆಯಲ್ಲಿ ತೊಡಗಿದ್ದಾರೆ. ಇವರು ದೇವಸ್ಥಾನಗಳಿಂದ ಹೊರಹಾಕುವ ಹೂವನ್ನು ಸಂಗ್ರಹಿಸಿ, ನಂತರ ವಿಂಗಡಿಸಿದ ಹೂಗಳಿಂದ ಪ್ರತ್ಯೇಕ ವಿಧಾನದಿಂದ ಬಣ್ಣಗಳನ್ನು ತಯಾರಿಸುತ್ತಿದ್ದಾರೆ. ಅವರ ಪ್ರಕಾರ ಎಲ್ಲಾ ಬಗೆಯ ಹೂವುಗಳಿಂದ ಬಣ್ಣ ತಯಾರಿಕೆ ಆಸಾಧ್ಯ. ಉದಾಹರಣೆಗೆ ರೋಜಾ ಹೂವು, ಜೆರ್ಬೆರಾ ಹೂವುಗಳು ವಿವಿಧ ಬಣ್ಣಗಳಲ್ಲಿ ಇದ್ದರೂ ಸಹ ಅವುಗಳ ಬಣ್ಣ ಬಟ್ಟೆಯ ನೂಲಿನೊಂದಿಗೆ ಬೆರೆಯುವುದಿಲ್ಲ. ಬಣ್ಣಗಳ ತಯಾರಿಕೆಯಲ್ಲಿ ಮೊದಲಿಗೆ ಹೂವಿನ ದಳಗಳನ್ನು ಕುದಿಸಲಾಗುವುದು, ಡೈ ಮಾಡುವ ಬಟ್ಟೆಯನ್ನು ಬಣ್ಣ ಬೆರೆಯುವ ಹಾಗೆ ಹದಗೊಳಿಸುವರು ನಂತರ ಮೋರ್ಡೆಂಟ್ ಅಥವ ಡೈ ಮಾಡಲಾಗುವುದು. ಬಟ್ಟೆಗಳ ನೇಯ್ಗೆ ಹಾಗೂ ಡೈ ಬಗ್ಗೆ ಈ ಟ್ರಸ್ಟ್‌ನವರು ವರ್ಕ್ ಶಾಪ್‌ಗಳನ್ನು ಆಯೋಜಿಸುತ್ತಾರೆ.

ವಸ್ತ್ರಗಳಿಗೆ ಕೆಮಿಕಲ್ ಡೈಗೆ ಹೋಲಿಸಿದರೆ ನೈಸರ್ಗಿಕ ಡೈ ಮಾಡಲು ಸಮಯ ಹಾಗೂ ಪರಿಶ್ರಮ ಹೆಚ್ಚು ಬೇಕಾಗುವುದರಿಂದ ಇವುಗಳು ಕೆಮಿಕಲ್ ಡೈಗಳಿಗೆ ಪರ್ಯಾಯವಾಗುವುದು ಕಷ್ಟ. ಆದರೆ ಸಾಧ್ಯವಾಗುವಷ್ಟು ಈ ರೀತಿಯಲ್ಲಿ ಮರುಬಳಕೆ ಮಾಡಿದಲ್ಲಿ ಹೂವು ಬಾಡಿದರೂ ಸಹ ಅದರ ಬಣ್ಣ ಬಟ್ಟೆಗಳ ಮೇಲೆ ವರ್ಣಮಾಯವಾಗಿ ಉಳಿಯುತ್ತದೆ. ■

ಶ್ರೀಲಕ್ಷ್ಮಿ



ಪ್ರಕೃತಿದತ್ತವಾಗಿ ಬಂದಿರುವ ವಸ್ತುಗಳಲ್ಲಿ ಹೂವಿಗೆ ಅಗ್ರಗಣ್ಯ ಸ್ಥಾನವಿದೆ. ಇಂತಹ ಹೂವಿನ ಮರುಬಳಕೆ ಹಲವು ರೀತಿಗಳಲ್ಲಿ ಆಗುತ್ತಿರುತ್ತವೆ. ಹೂವಿನ ತ್ಯಾಜ್ಯದಿಂದ ಕಾಂಪೋಸ್ಟ್ ಗೊಬ್ಬರ ತಯಾರಿಕೆ, ಸುಗಂಧಭರಿತ ಹೂವಿನ ತ್ಯಾಜ್ಯದಿಂದ ಧೂಪದ್ರವ್ಯಗಳು, ಸೋಪುಗಳು, ಸುಗಂಧದ್ರವ್ಯಗಳು ಹಾಗೂ ಹಲವು ಊದಿನ ಕಡ್ಡಿ ತಯಾರಿಕೆಗೆ ರಾಸಾಯನಿಕ ರಹಿತ ಹೂವನ್ನೇ ಬಳಸುತ್ತಿದ್ದಾರೆ. ಈಗ ಹೂವಿನಿಂದ ನೈಸರ್ಗಿಕ ಬಣ್ಣಗಳನ್ನು ಸಹ ತಯಾರಿಸುತ್ತಿರುವುದು ಹೂವಿನ ಬಳಕೆಗೆ ಹೊಸ ಆಯಾಮ ನೀಡಿದೆ.

ಮುರ್ರಾ ಎಮ್ಮೆ ಉತ್ತಮ ಆದಾಯದ ಹೆಮ್ಮೆ!

ಕೃಷಿ ಜತೆಗೆ ಹೈನೋದ್ಯಮ ಮಾಡಬೇಕು ಎನ್ನುವವರಿಗೆ ಮುರ್ರಾ ಎಮ್ಮೆ ಸಾಕಣೆ ಒಳ್ಳೆಯ ಆಯ್ಕೆ. ದಿನಕ್ಕೆ 16ರಿಂದ 25 ಲೀಟರ್ ಹಾಲು ಕೊಡುವ ಮುರ್ರಾ ಎಮ್ಮೆಗಳು ರೈತರ ಜೇಬು ತುಂಬಿಸುತ್ತಿವೆ. ಹರಿಯಾಣದ ಈ ತಳಿಯು ಹಾಲು ಉತ್ಪಾದನೆಗೆ ಹೆಸರಾಗಿರುವುದಲ್ಲದೆ ಉತ್ತಮ ರೋಗ ನಿರೋಧಕ ಶಕ್ತಿ ಹೊಂದಿದ್ದು, ದಕ್ಷಿಣ ಭಾರತದ ಹವಾಗುಣದಲ್ಲೂ ಸಾಕಬಹುದಾಗಿದೆ. ವೃತ್ತಿಪರ ಡೇರಿ ಫಾರಂ ಆರಂಭಿಸಬೇಕು ಎನ್ನುವವರಿಗೆ ಮುರ್ರಾ ತಳಿ ಹೇಳಿ ಮಾಡಿಸಿದಂತಿದೆ. ಸುಮಾರು 300 ದಿನಗಳವರೆಗೆ ಹಾಲು ಕೊಡುವ ಈ ಎಮ್ಮೆಗಳು 12 ವರ್ಷ ಬದುಕುತ್ತವೆ. ಹಾಲಿನ ಉತ್ಪಾದನೆ ಸಾಮರ್ಥ್ಯದ ಆಧಾರದಲ್ಲಿ ಮುರ್ರಾ ಬೆಲೆ 1 ಲಕ್ಷ ರೂ.ನಿಂದ 1.5 ಲಕ್ಷ ರೂ.ವರೆಗೆ ಇದೆ. ಭಾರತದಲ್ಲಷ್ಟೇ ಅಲ್ಲ, ಜಾಗತಿಕವಾಗಿಯೂ ಬೇಡಿಕೆಯಿದೆ. ಶ್ರೀಲಂಕಾ, ವಿಯೇಟ್ನಾಂ, ಚೀನಾ, ಮಲೇಷ್ಯಾ, ನೇಪಾಳ, ಬ್ರೆಜಿಲ್ ಸೇರಿ ಹಲವು ದೇಶಗಳಿಗೆ ಮುರ್ರಾ ಎಮ್ಮೆಗಳು ರಫ್ತಾಗುತ್ತಿವೆ.

ಮುರ್ರಾದಲ್ಲಿದೆ ಒಳ್ಳೆಯ ಆದಾಯ: ಮುರ್ರಾ ಎಮ್ಮೆ ಸಾಕಲು ಹಸಿ ಹುಲ್ಲು, ಒಣ ಹುಲ್ಲು, ಫೀಡ್ಸ್ ಸೇರಿ ಪ್ರತಿ ದಿನಕ್ಕೆ 100ರಿಂದ 120 ರೂ. ಖರ್ಚು ಬರುತ್ತದೆ. ಆದರೆ ದಿನಕ್ಕೆ 25 ಲೀಟರ್‌ವರೆಗೆ ಹಾಲು ಕರೆಯುವುದರಿಂದ ಈ ಖರ್ಚು ದೊಡ್ಡದಲ್ಲ. ಅಲ್ಲದೆ ಮುರ್ರಾ ಸುಮಾರು 300 ದಿನಗಳವರೆಗೆ ಹಾಲು ಕೊಡುವುದರಿಂದ ಸಾಕುವ ರೈತನಿಗೆ ದೀರ್ಘಾವಧಿವರೆಗೆ ಆದಾಯ ಲಭಿಸುತ್ತದೆ. ಸಾಮಾನ್ಯಹಸುಗಳ ಹಾಲಿನಲ್ಲಿ ಶೇ.3ರಿಂದ 4 ಕೊಬ್ಬಿನಂಶ ಇರುತ್ತದೆ. ಆದರೆ ಮುರ್ರಾ ಎಮ್ಮೆ ಹಾಲಿನಲ್ಲಿ ಕೊಬ್ಬಿನಂಶ ಶೇ.6.5ರಿಂದ 8 ಇರುವುದರಿಂದ ಹಾಲಿನ ಬೆಲೆಯೂ ಹೆಚ್ಚು. ಹಾಗಾಗಿ ಮುರ್ರಾ ಸಾಕುವವರು ಮಾರುಕಟ್ಟೆ ಬಗ್ಗೆಯಾಗಲಿ, ಉತ್ತಮ ಆದಾಯ ಗಳಿಸುವ ಬಗ್ಗೆಯಾಗಲಿ ಯೋಚಿಸಬೇಕಿಲ್ಲ. ಈ ಅನುಕೂಲಗಳ ಕಾರಣದಿಂದಾಗಿ ಹೈನುಗಾರಿಕೆ ಕ್ಷೇತ್ರದಲ್ಲಿ ಮುರ್ರಾ ಹೆಸರು ಎಲ್ಲೆಡೆ ಕೇಳಿಬರುತ್ತಿದೆ.

ಕೃಷಿ ಸಂಬಂಧಿತ ಉಪಕಸುಬುಗಳ ಬಗ್ಗೆ ಕೋರ್ಸ್: ಕೋಳಿ ಸಾಕಣೆ ಕೋರ್ಸ್, ಹಂದಿ ಸಾಕಣೆ ಕೋರ್ಸ್, ಕುರಿ ಮತ್ತು ಮೇಕೆ ಸಾಕಣೆ ಕೋರ್ಸ್, ಮೀನು ಕೃಷಿ ಕೋರ್ಸ್, ಹೈನುಗಾರಿಕೆ ಕೋರ್ಸ್, ಕಡಕ್‌ನಾಥ್ ಕೋಳಿ ಸಾಕಣೆ ಕೋರ್ಸ್, ಜೀನು ಸಾಕಣೆ ಕೋರ್ಸ್, ಸೀಗಡಿ ಕೃಷಿ ಕೋರ್ಸ್, ಗಾಣದ ಎಣ್ಣೆ ಬಿಸಿನೆಸ್ ಕೋರ್ಸ್ ಹೀಗೆ ಹತ್ತು ಹಲವು ವಿಚಾರಗಳ ಬಗ್ಗೆ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಕೋರ್ಸ್‌ಗಳಿವೆ.



ಕೃಷಿ ಕೋರ್ಸ್‌ಗಳು: ಹಣ್ಣಿನ ಬೆಳೆಗಳ ಬಗ್ಗೆ ಮಾಹಿತಿ ನೀಡುವ ಡ್ರ್ಯಾಗನ್ ಫ್ರೂಟ್ ಕೋರ್ಸ್, ರಂಬುಟಾನ್ ಕೋರ್ಸ್, ಬಟರ್ ಫ್ರೂಟ್ ಕೋರ್ಸ್, ನೇರಳೆ ಹಣ್ಣಿನ ಕೃಷಿ ಕೋರ್ಸ್, ಹಲಸಿನ ಬಗ್ಗೆ ಕೋರ್ಸ್‌ಗಳು, ತೈವಾನ್ ಸೀಬೆ ಕೋರ್ಸ್, ಅಂಜೂರ ಕೃಷಿ ಕೋರ್ಸ್, ದಾಳಿಂಬೆ ಕೃಷಿ ಕೋರ್ಸ್ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿವೆ. ಇಷ್ಟೇ ಅಲ್ಲ, ರೇಷ್ಮೆ ಕೃಷಿ ಕೋರ್ಸ್, ಸಮಗ್ರ ಕೃಷಿ ಕೋರ್ಸ್, ಅರಣ್ಯ ಕೃಷಿ ಕೋರ್ಸ್, ಅಣಬೆ ಕೃಷಿ ಕೋರ್ಸ್, ಹೂವಿನ ಕೃಷಿ ಕೋರ್ಸ್, ನರ್ಸರಿ ಬಿಸಿನೆಸ್ ಕೋರ್ಸ್ ಮತ್ತು 1 ಎಕರೆ ಕೃಷಿ ಭೂಮಿಯಲ್ಲಿ ಒಂದು ಲಕ್ಷ ರೂ. ಗಳಿಸುವುದು ಹೇಗೆ ಎನ್ನುವ ಬಗ್ಗೆ ಕೋರ್ಸ್‌ಗಳಿವೆ.

ಕೃಷಿ ಜತೆಗೆ ಬಿಸಿನೆಸ್ ಮಾಡುವವರಿಗೂ ಇವೆ ಆಯ್ಕೆ: ಕೃಷಿ ಜತೆ ಜತೆಗೆ ಬಿಸಿನೆಸ್ ಮಾಡಬೇಕು ಎನ್ನುವವರಿಗೂ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಹತ್ತಾರು ಕೋರ್ಸ್‌ಗಳಿವೆ. ಫುಡ್ ಟ್ರಕ್ ಬಿಸಿನೆಸ್, ಹಳ್ಳಿಯಿಂದ ಬಿಸಿನೆಸ್ ಕಟ್ಟೋದು, ಹೋಟೆಲ್ ಆರಂಭಿಸೋದು, ಕರಕುಶಲ ವಸ್ತುಗಳ ತಯಾರಿಕೆ ಮತ್ತು ಮಾರಾಟ, ದಿನಸಿ ಅಂಗಡಿ ಆರಂಭಿಸೋದು, ಉಪ್ಪಿನಕಾಯಿ ಬಿಸಿನೆಸ್ ಆರಂಭಿಸೋದು, ಬೇಕರಿ ಶುರು ಮಾಡೋದು, ಹೇರ್ ಕಟ್ಟಿಂಗ್ ಶಾಪ್ ಆರಂಭಿಸೋದು, ಹೋಮ್ ಸ್ಟೇ ಶುರು ಮಾಡೋದು, ನಂದಿನಿ ಮಿಲ್ಕ್ ಪಾರ್ಲರ್ ಫ್ರಾಂಚೈಸಿ ಪಡೆಯೋದು, ತರಕಾರಿ ಅಂಗಡಿ ಪ್ರಾರಂಭ ಮಾಡೋದು, ಸೋಪ್ ತಯಾರಿಕೆ ಬಿಸಿನೆಸ್ ಮಾಡೋದು, ಮನೆಯಿಂದ ಕೇಕ್ ತಯಾರಿಸಿ ಮಾರಾಟ ಮಾಡೋದು ಹೀಗೆ ಆದಾಯ ಕಂಡುಕೊಳ್ಳುವ ಅನೇಕ ಆಯ್ಕೆಗಳು ಈ ಆ್ಯಪ್‌ನಲ್ಲಿವೆ.

ಮನಿ ಮಾತು



ಆಪ್ತ ಸಲಹೆ

| ಸಿ.ಎಸ್. ಸುಧೀರ್

ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com



ಕೋರ್ಸ್‌ನಲ್ಲಿ ಏನಿದೆ ಮಾಹಿತಿ?

- ಕೋರ್ಸ್‌ನ ಪರಿಚಯ
- ಮಾರ್ಗದರ್ಶಕರ ಪರಿಚಯ
- ಮುರ್ರಾ ಎಮ್ಮೆ ಸಾಕಣೆ ಕೋರ್ಸ್- ಮೂಲ ಪ್ರಶ್ನೆಗಳು
- ಬಂಡವಾಳ ಮತ್ತು ಸರ್ಕಾರದ ಸೌಲಭ್ಯ
- ಮುರ್ರಾ ತಳಿ ಆಯ್ಕೆ ಪ್ರಕ್ರಿಯೆ
- ಹವಾಮಾನ, ಆಹಾರ ಮತ್ತು ನೀರು
- ಹಾಲಿನ ಪ್ರಮಾಣ
- ಮುರ್ರಾ ಎಮ್ಮೆ ಕೃಷಿ- ಅನುಕೂಲ, ಆನನುಕೂಲ
- ಮುರ್ರಾ ಎಮ್ಮೆಯ ಜೀವನ ಚಕ್ರ
- ರೋಗಗಳು ಮತ್ತು ನಿಯಂತ್ರಣ
- ಖರ್ಚು ಮತ್ತು ಲಾಭ
- ಶೆಡ್, ಯಂತ್ರೋಪಕರಣ, ಇತರ ಸಲಕರಣೆಗಳು
- ಕೆಲಸಗಾರರು ಮತ್ತು ಕಾರ್ಯ ನಿರ್ವಹಣೆ
- ಸವಾಲುಗಳು ಮತ್ತು ಮಾರ್ಗದರ್ಶಕರ ಸಲಹೆ

ಫ್ರೀಡಂ ಆ್ಯಪ್‌ನಲ್ಲಿ ಮುರ್ರಾ ಎಮ್ಮೆ ಸಾಕಣೆ ಕೋರ್ಸ್

ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಮುರ್ರಾ ಎಮ್ಮೆ ಸಾಕಣೆ ಬಗ್ಗೆ ವಿವರವಾದ ಕೋರ್ಸ್ ರೂಪಿಸಲಾಗಿದೆ. 200ಕ್ಕೂ ಹೆಚ್ಚು ಮುರ್ರಾ ಎಮ್ಮೆಗಳನ್ನು ಸಾಕಿ ತಿಂಗಳಿಗೆ ಲಕ್ಷಾಂತರ ರೂ. ಆದಾಯ ಗಳಿಸುತ್ತಿರುವ ಸಾಧಕ ರೈತರೇ ಈ ಕೋರ್ಸ್‌ನಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಮುರ್ರಾ ಎಮ್ಮೆ ಹೇಗೆ ರೈತನ ಮಿತ್ರನಾಗಿ ಆದಾಯ ಹೆಚ್ಚಿಸುತ್ತದೆ ಎನ್ನುವ ಬಗ್ಗೆ ಕಂಪ್ಲೀಟ್ ಮಾಹಿತಿ ಇದೆ. ಎಲ್ಲಿಂದ ಮುರ್ರಾ ಎಮ್ಮೆಗಳನ್ನು ತರಬೇಕು, ಮುರ್ರಾ ಗುರುತಿಸುವುದು ಹೇಗೆ, ಸಾಕಲು ಯಾವ ರೀತಿಯ ಕೃತಕ ವಾತಾವರಣ ನಿರ್ಮಾಣ ಮಾಡಬೇಕು, ಹೀಗೆ ಹತ್ತು ಹಲವು ವಿಚಾರಗಳು ಕೋರ್ಸ್‌ನಲ್ಲಿವೆ. ಇನ್ನೇಕೆ ತಡ, ಈಗಲೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ಮುರ್ರಾ ಎಮ್ಮೆಗಳನ್ನು ಸಾಕುವುದು ಹೇಗೆ ಎನ್ನುವುದನ್ನು ಪ್ರಾಯೋಗಿಕವಾಗಿ ಕಲಿತು ಆದಾಯ ಗಳಿಕೆ ದಾರಿ ಕಂಡುಕೊಳ್ಳಿ.

ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, 2,000 ರೂ. ಸ್ಕಾಲರ್‌ಶಿಪ್ ಪಡೆಯಿರಿ.

ವಾಡಾ ಅಕ್ಕಿಗೆ ಮಾನ್ಯತೆ

ಮಹಾರಾಷ್ಟ್ರದ ಪಲ್ಘಾರ್ ಜಿಲ್ಲೆಯ ವಾಡಾ ಎಂಬಲ್ಲಿ ವ್ಯಾಪಕವಾಗಿ ಬೆಳೆಯುವ ಅಕ್ಕಿಗೆ ಈಗ ಭೌಗೋಳಿಕ ಮಾನ್ಯತೆ ನೀಡಲಾಗಿದೆ. ಸೆ.29ರಂದು ಮುಂಬೈಯಲ್ಲಿ ನಡೆದಿರುವ ವಿಭಾಗೀಯ ಕೃಷಿ ಮಂಡಳಿ ಸಭೆಯಲ್ಲಿ ಈ ಅಕ್ಕಿಗೆ ಭೌಗೋಳಿಕ ಮಾನ್ಯತೆ ನೀಡುವ ತೀರ್ಮಾನ ಕೈಗೊಳ್ಳಲಾಯಿತು. ವಾಡಾ ತಾಲೂಕಿನ 180 ಗ್ರಾಮಗಳಲ್ಲಿ ಸುಮಾರು 2500 ಮಂದಿ ರೈತರು ಈ ಅಕ್ಕಿಯನ್ನು ಬೆಳೆಯುತ್ತಿದ್ದಾರೆ. ಹೀಗಾಗಿ ಸಾಂಪ್ರದಾಯಿಕ ತಳಿಯ ಈ ಅಕ್ಕಿಗೆ ವಾಡಾ ಕೊಲಂ ಅಥವಾ ಜಿನಿ ಇಲ್ಲವೇ ಝಿನಿ ಅಕ್ಕಿ ಎಂದೂ ಕರೆಯಲಾಗುತ್ತಿದೆ. ದೇಶೀಯ ಮಾರುಕಟ್ಟೆಯಲ್ಲಿ ಪ್ರತಿಕಿಲೋಗೆ 60ರಿಂದ 70 ರೂ. ಬೆಲೆಯಿರುವ ಈ ಅಕ್ಕಿಗೆ ವಿದೇಶಿ ಮಾರುಕಟ್ಟೆಯಲ್ಲೂ ಬೇಡಿಕೆ ಇದೆ.



04-10-2021 Sk Pg 07

04-10-2021 Vv Pg 06

Reimagining food systems with lessons from India

With an alarming escalation in global hunger unfolding, reaching the goal of an equitable livelihood is a necessity



BISHOW PARAJULI & RAMESH CHAND

The first and historic United Nations Food Systems Summit (UNFSS) 2021 which was held in September this year, concluded after an intense 'bottom-up' process conceived in 2019 by UN Secretary-General António Guterres to find solutions and 'catalyse momentum' to transform the way the world produces, consumes, and thinks about food and help address rising hunger.

In terms of larger goals, the food system transformation is considered essential in achieving the sustainable development agenda 2030. This makes strong sense as 11 Sustainable Development Goals (SDGs) out of 17 are directly related to the food system.

The summit involved several activities before the run-up to the meeting of the Head of States on September 23. While the dialogues on the five tracks identified have been under way for the past 18 months, the world has seen the fragility and vulnerability of food systems, highlighted by the disruptive impact of the COVID-19 pandemic that is projected to double the global hunger figure.

Why the Food Systems Summit and what is the expectation from its outcome? Global food systems – the networks that are needed to produce and transform food, and ensure it reaches consumers, or the paths that food travels from production to plate – are in a state of crisis in many countries affecting the poor and the vulnerable. The flaws in food systems affect us all, but most of all they are affecting 811 million people in the world who go to bed hungry each night.

The summit created a mechanism for serious debates involving UN member states, civil society, non-governmental organisations, academics, researchers, individuals, and the private sector, which is to evolve transformative themes and ideas for reimagining food systems to enhance satisfaction of all stakeholders including future generations. The debate and response focused on five identified action tracks namely: Ensure access to safe and nutritious food for all; Shift to sustainable consumption patterns; Boost nature-positive production; Advance equitable livelihoods, and Build resilience to vulnerabilities, shocks, and stress.

The summit provided a historic opportunity to empower all people to leverage the power of food systems to drive our recovery from the COVID-19 pandemic and get us back on track to achieve all 17 SDGs by 2030.

The Statement of Action emerging from the summit offers a concise set of ambitious, high-level principles and areas for action to support the global call to "Build back better" after the COVID-19 pandemic.

India constituted an inter-departmental group under the Chairmanship of one of us , with representatives from the Ministries of Agriculture and Farmers' Welfare, Rural Development, and others. Delhi-based U.N. agencies namely the Food and Agriculture Organization (FAO), the World Food Programme (WFP), and the International Fund for Agricultural Development (IFAD) were also actively involved in the dialogue process. The group conducted national dialogues with various stakeholders of agri-food systems to explore national pathways towards creating sustainable and equitable food systems in India. Several individuals and civil society organisations contributed ideas to the portal which was created for this purpose.

Helping the developing world

There are lessons from India's tryst with food insecurity. Several themes that have emerged in the discussions and dialogues leading up to the summit find resonance with India's past and ongoing journey towards creating and improving food and livelihood security. The long journey from chronic



AFP

food shortage to surplus food producer offers several interesting lessons for other developing countries in Asia, Africa, and Latin America in the area of land reforms, public investments, institutional infrastructure, new regulatory systems, public support, and intervention in agri markets and prices and agri research and extension.

The period between 1991 to 2015, saw the diversification of agriculture beyond field crops and brought greater focus on the horticulture, dairy, animal husbandry, and fishery sectors. The learnings encompassed elements of nutritional health, food safety and standards, sustainability, deployment of space technology, and the like.

Safety nets, challenges

One of India's greatest contributions to equity in food is its National Food Security Act 2013 that anchors the Targeted Public Distribution System (TPDS), the Mid-Day meals (MDM), and the Integrated Child Development Services (ICDS). Today, India's food safety nets collectively reach over a billion people.

Food safety nets and inclusion are linked with public procurement and buffer stock policy. This was visible during the global food crises 2008-2012 and more recently during the COVID-19 pandemic fallout, whereby vulnerable and marginalised families in India continued to be buffered against the food crisis by its robust TPDS and buffer stock of food grains.

A look at the challenges and the way forward towards 2050. Climate change and unsustainable use of land and water resources are the most formidable challenges food systems face today. The latest Intergovernmental Panel on Climate Change (IPCC) report has set the alarm bells ringing, highlighting the urgency to act now.

Dietary diversity, nutrition, and related health outcomes are another area of concern as a focus on rice and wheat has created nutritional challenges of its own. India has taken a bold decision to fortify rice supplied through the Public Distribution System with iron. Agricultural research institutes are about to release varieties of many crops having much higher nutrition as a long-term solution for undernutrition and malnutrition.

Surplus and low nutrition

It is ironic that despite being a net exporter and food surplus country at the aggregate level, India has a 50% higher prevalence of undernutrition compared to the world average. But the proportion of the undernourished population declined from 21.6% during 2004-06 to 15.4% during 2018-20. The high prevalence of undernutrition in the country does not seem to be due to food shortage or the low availability of food. The Government of India and States are seriously concerned about this paradoxical situation of being food surplus and at the same time, having 15% of the population undernourished. They are trying to address other possible reasons for low nutrition through several nutritional interventions. As announced recently, the supply of fortified rice in PDS and Poshan Abhiyan are the two steps among many to address the challenge of undernutrition and malnutrition.

Reducing food wastage or loss of food is a mammoth challenge and is linked to the efficiency of the food supply chain. Food wastage in India exceeds ₹1-lakh crore.

Why the world must eliminate hunger is the next point. An alarming escalation in global hunger is unfolding, with the 'dramatic worsening' of world hunger in 2020, much of it likely related to the fallout of COVID-19. While the pandemic's impact has yet to be fully mapped, 'The State of Food Security and Nutrition in the World' report, estimates that around a tenth of the global population was undernourished last year.

It is important to reiterate that hunger and food insecurity are key drivers of conflict and instability across the world. 'Food is peace', is a catchphrase often used to highlight how hunger and conflict feed on each other. The Nobel Peace Prize 2020 conferred on the United Nations WFP highlighted the importance of addressing hunger to prevent conflicts and create stability. The citation communiqué articulated this well by quoting the line: "Until the day we have a medical vaccine, food is the best vaccine against chaos."

For equity, sustainability

We are on the cusp of a transformation to make the world free of hunger by 2030 and deliver promises for SDGs, with strong cooperation and partnership between governments, citizens, civil society organisations, and the private sector. We must collaborate to invest, innovate, and create lasting solutions in sustainable agriculture contribution to equitable livelihood, food security, and nutrition. India has so much to offer from its successes, and learning also, to prepare itself for the next 20 to 30 years. This surely requires reimagining the food system towards the goal of balancing growth and sustainability, mitigating climate change, ensuring healthy, safe, quality, and affordable food, maintaining biodiversity, improving resilience, and offering an attractive income and work environment to smallholders and youth. Achieving the goal of "Advancing equitable livelihood" requires that the food systems transformation is anchored around small- and medium-scale production, family farmers, indigenous peoples, women, and workers in food value chains.

Bishow Parajuli is United Nations World Food Programme India Representative and Country Director. Ramesh Chand is Member, NITI Aayog and India's Convenor of the National Dialogue on Food Systems Summit

04-10-2021 Hindu Pg 06